ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ ತಾ|| 17, ಸನ್ 1885.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್ಗಳು.

ಸನ್ 1885ನೇ ಇಸವಿಯ ರೆಗ್ಯುಲೇಷನ್ ನಂಬರ II.

ಇದರಡೀ ಕಂಡ ರೆಗ್ಯುಲೇಷನು, 1885ನೇ ಇಸವಿ ಸೆಪ್ಟಂಬರ 15ನೇ ಮರ್ಕುಮಿನಲ್ಲಿ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಅನುಮತಿಯನ್ನು ಪಡೆದು ಯಿದರ ದೆಸೆಯಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ.

ಕುಶಲ ವಿದ್ಯೆಗಳಲ್ಲಿಯೂ, ಕಾರಖಾನೆ ಕೆಲಸಗಳಲ್ಲಿಯೂ ಯಾ ಕೆಮಿಸ್ಟ್ರಿಯೆಂಬೊ ರಸಶಾಸ್ತ್ರಗಳಲ್ಲಿಯೂ ಮಾತ್ರ ಉಪಯೋಗಿಸಲ್ಪಡುವ ಸ್ಪಿರಿಟ್ ಸಾರಾಯಿಗಳ ಮೇಲೆ ತೆರಬೇಕಾದ ತೆರಿಗೆಗಳನ್ನು ವಸೂಲ್ ಮಾಡುವದಕ್ಕೋಸ್ಕರ ವಿಶೇಷ ನಿಯಮಗಳು ಕಲ್ಪಿಸುವದಕ್ಕೆ ಹುಟ್ಟಿದ ರೆಗ್ಯುಲೇಷನು.

ಮಂತ್ರಾಲೋಚಕ ಸಮಾಜದಲ್ಲಿನ ಗವರ್ನರ ಜನರಲ್ ಸಾಹೇಬರವರ 1863ನೇ ಇಸವಿಯ XVIನೇ ನಂಬರ ಆಕ್ಟನ್ನು ಮೈಸೂರು ಸೀಮೆಗೆ ಲಗಾವ ಮಾಡುವದು ಆವಶ್ಯಕವಾಗಿರುವದರಿಂದ, ಶ್ರೀಮನ್ ಮಹಾರಾಜಾ ಸರ್ಕಾರದವರು ವಿಧಿಸುವದೇನಂದರೆ, ಸದರೀ 1863ನೇ ಇಸವಿಯ XVIನೇ ನಂಬರ ಆಕ್ಟು, ಇದರಡೀ ಕಂಡ ಬದಲಾವಣೆಗಳು ಮತ್ತು ತಳ್ಳುಪಡಿಗಳೊಂದಿಗೆ 1885ನೇ ಇಸವಿ ಅಕ್ಟೋಬರ 1ನೇ ಮರ್ಕುಂ ಲಾಗಾಯತು, ಮೈಸೂರು ದೇಶದಲ್ಲಿ ಕಾನೂನಿನ ಬಲವುಳ್ಳದ್ದಾಗಿರತಕ್ಕದ್ದು.

ವಂದನೇ ಸೆಕ್ಷನ್ನಲ್ಲಿ “ಶೇಕಡಾ 10ರ ಪ್ರಕಾರ ಲೆಖ್ಖ ಮಾಡಲ್ಪಟ್ಟ” ಯೆಂಬ ಮಾತುಗಳಿಗೆ ಬದಲಾಗಿ “ಶೇಕಡಾ 5ಕ್ಕೆ ಜಾಸ್ತಿಯಾಗದ” ಯೆಂಬ ಮಾತುಗಳು ಸೇರಿಸಲ್ಪಡತಕ್ಕದ್ದು.

2. “ಬ್ರಿಟಿಷ್ ಇಂಡಿಯ” ಯೆಂಬದಕ್ಕೆ “ಮೈಸೂರು ದೇಶ” ಯೆಂತಲೂ “ಬೋರಡ್ ಆಫ್ ರೆವಿನ್ಯೂ” ಮತ್ತು “ಲೋಕಲ್ ಗವರ್ನಮೆಂಟ್” ಯೆಂಬ ಮಾತುಗಳಿಗೆ ಬದಲಾಗಿ “ಮೈಸೂರು ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಸರ್ಕಾರದ” ಯೆಂಬದಾಗಿ ಓದಿಕೊಳ್ಳತಕ್ಕದ್ದು.

3. ಯೆಂಟನೇ ಸೆಕ್ಷನನ್ನು ಬಿಟ್ಟು ಬಿಡತಕ್ಕದ್ದು.

ಮೈಸೂರು,
15ನೇ ಸೆಪ್ಟಂಬರ 1885.

ಕೆ. ಶೇಷಾದ್ರಿ ಅಯ್ಯರ್,
ದಿವಾನ್, ಮೈಸೂರು.